

■ ರಾಜೀವ ನಾರಾಯಣ ನಾಯಕ
ಕಲೆ: ಎಚ್.ಎಸ್. ಮೋನಪ್ಪ

# ಕಡಲು ಕರೆಯಿತು, ಕಡಲು ಹರಸಿತು...

ಸುಮಿ ಮತ್ತು ಪ್ರೀತಂ ಒಂದು ಬಂಡೆಯ ಮೇಲೆ, ಶೈಲತ್ತೆ ಎದುರು ಬಂಡೆಯ ಮೇಲೆ, ದ್ವೀಪದ ಆ ದಿವ್ಯ ಮೌನವನ್ನು ಆಲಿಸುವವರಂತೆ ಮಾತಿಲ್ಲದೇ ಕೂತರು. 'ಸ್ಕೂಲಲ್ಲಿ ನಮ್ಮ ಮಕ್ಕಳು ಪಾಪ, ಐಲ್ಯಾಂಡಿಗೆ 'ಹಮೇಶಾ ಐಸ್ ಲ್ಯಾಂಡ್ ಅಂತ ಓದ್ತಾರ. ಎಸ್ ಸೈಲಂಟು ಅಂದ್ರೆ 'ಯಾಕ್ರೀ' ಅಂತ ಕೇಳ್ತಾರ. ದ್ವೀಪದಲ್ಲಿ ಸಿಕ್ಕಾಪಟ್ಟೆ ಸೈಲನ್ಸು ಇರತ್ತೈತಿ, ಅದ್ಕೆ ಅಂತ ಸುಮ್ನೆ ರೈಲು ಬಿಟ್ಟಿದ್ದೆ. ಈಗ ಅದು ಖರೇನ ಅನಿಸ್ತೈತಿ' ಎಂದಳು ಶೈಲತ್ತೆ. ಆ ನಿರ್ಜನ ದ್ವೀಪದ ಅನನ್ಯ ಸೌಂದರ್ಯಕ್ಕೆ ಸುಮಿಯೂ ಮೈಮರೆತಿದ್ದಳು. ಮುಖ್ಯ ಭೂಮಿಯಿಂದ ಅಗಲಿರುವ ಈ ಪುಟ್ಟ ದ್ವೀಪದ ಏಕಾಂತ ಅವಳಿಗೆ ಇಷ್ಟವಾಗಿತ್ತು. ಅಲ್ಲಿರುವ ಗಿಡ ಮರ ಬಳ್ಳಿ ಹೂವು ಹಣ್ಣುಗಳು ಮನುಷ್ಯ ಸಹವಾಸದ ಹಂಗು ತೊರೆದು ನಳನಳಿಸುತ್ತಿದ್ದವು. ವಲಸೆ ಬಂದಂತಿರುವ ಹಕ್ಕಿಗಳೂ ಚಿಲಿಪಿಲಿಗುಟ್ಟುತ್ತಾ ಸುಖವಾಗಿವೆ ಅನಿಸುತ್ತಿತ್ತು. 'ಇಲ್ಲಿಂದ ಹೊರಳಿ ಹೋಗೋಕೆ ಮನಸು ಬರಾಂಗಿಲ್ಲ' ಅಂದಳು ಶೈಲತ್ತೆ.

ದೇವಸ್ಥಾನದಿಂದ ಬರುವಾಗ ಶೈಲತ್ತೆ ಸುಮಿಗೆ ಬೇಕಾದದ್ದನ್ನೆಲ್ಲಾ ಕೊಡಿಸಿದಳು. ದಂಡೆಯಲ್ಲಿ ಅಲೆಗಳ ಹೊಡೆತಕ್ಕೆ ನುಣುಪಾಗಿ ಬಿದ್ದಿದ್ದ ಕಲ್ಲುಗಳ ರಾಶಿಯಿಂದ ಹರಳೊಂದನ್ನು ನೆನಪಿಗೆ ಇರಲಿ ಎಂದು ಸುಮಿ ಎತ್ತಿಕೊಂಡಳು. ಜಾತ್ರೆ ನೋಡಿ ಮರಳಿದ ಜನ ಆಗಲೇ ಬೋಟ್ ಹತ್ತಿ ಕೂತಿದ್ದರು. ಇನ್ನಿಬ್ಬರು ಬಂದ್ರೆ ಬೋಟ್ ಬಿಡ್ತೇನೆ ಅಂದ ಬೋಟ್ ಚಾಲಕ. ಆಗ ದೊಡ್ಡ ಗುಂಪೊಂದು

